**<u>ದಿನಾಂಕಃ 17.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲು ಃ 1 ನೇ ಪ್ರತಿವಾದಿ ಪರ ಶ್ರೀ ಕೆ .ಎನ್.ಬಿ., ವಕೀಲರು ಗೈರು ಹಾಜರಿರುವ ಕಾರಣ ಮುಂದುವರಿದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಪಾಟೀ ಸವಾಲು ಃ 3 ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎಸ್., ವಕೀಲರಿಂದಃ</u>**

1) ನಾನು ಪಿಯುಸಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದ ಮತ್ತು ಪ್ರತಿವಾದ ಪತ್ರದ ಸಂಗತಿಗಳನ್ನು ಹಾಗೂ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲೆಗಳನ್ನು ನಾನು ತಿಳಿದುಕೊಂಡಿದ್ದೇನೆ. ವಾದಿ ಎಂ ಎನ್ ರಮೇಶ್ ಬಾಬು ರವರು ನನಗೆ ಕಳೆದ 15 – 16 ವರ್ಷಗಳಿಂದ ಪರಿಚಯ ಇರುತ್ತಾರೆ. ನನಗೆ ಪ್ರಸ್ತುತ 40 ವರ್ಷ ವಯಸ್ಸು ಆಗಿದೆ. ನಾನು ಛಾಯಾಚಿತ್ರಗಾರನಾಗಿರುವ ಕಾರಣ ನನಗೆ ವಾದಿಯ ಪರಿಚಯ ಮೊದಲಿನಿಂದಲೂ ಇದೆ. ಕಳೆದ 15 ವರ್ಷಗಳಿಂದಲೂ ವಾದಿ ಎಂ.ಎನ್. ರಮೇಶ್ ಬಾಬುರವರಿಗೆ ಸೇರಿದ ಕೆಲವು ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ.

2) ವಾದಿ ಎಂ.ಎನ್. ರಮೇಶ್ ಬಾಬು ರವರ ಮನೆಯಲ್ಲಿ ಎಷ್ಟು ಜನ ಇರುತ್ತಾರೆ ಎಂದರೆ ಸಾಕ್ಷಿಯು ಅವರು ಒಟ್ಟು 03 ಜನ ಸಹೋದರರು ಇರುವುದಾಗಿ ನುಡಿಯುತ್ತಾರೆ. ಅವರೆಲ್ಲರೂ ಅನ್ಯೋನ್ಯವಾಗಿ ಇರುತ್ತಾರೆ. ವಾದಿ ಎಂ.ಎನ್. ರಮೇಶ್ ಬಾಬು ರವರ ಇತರೆ ಸಹೋದರರು ದೈಹಿಕವಾಗಿಯೂ ಸಧೃಢರಾಗಿರುತ್ತಾರೆ. ನನ್ನ ಜೊತೆ ವಾದಿ ಎಂ.ಎನ್. ರಮೇಶ್ ಬಾಬು ಅನ್ಯೋನ್ಯವಾಗಿ ಇರುವ ಕಾರಣ ಆತನ ಪರವಾಗಿ ಈ ಪ್ರಕರಣವನ್ನು ನಡೆಸುವಂತೆ ನನಗೆ ಅಧಿಕಾರ ನೀಡಿರುತ್ತಾರೆ. ವಾದಿ ಎಂ.ಎನ್. ರಮೇಶ್ ಬಾಬು ರವರ ವಿರುದ್ದ ಚನ್ನಪಟ್ಟಣದ ನ್ಯಾಯಾಲಯಗಳಲ್ಲಿ ಇನ್ನೂ ಇನ್ನೂ ಬೇರೆ ಬೇರೆ ಪ್ರಕರಣಗಳು ಚಾಲ್ತಿಯಲ್ಲಿವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಎಂ.ಎನ್. ರಮೇಶ್ ಬಾಬು ರವರು ಪಿಯುಸಿ

ವಿದ್ಯಾಭ್ಯಾಸ ಮಾಡಿರಬಹುದು. ವಾದಿ ಚನ್ನಪಟ್ಟಣ ತಾಲ್ಲೂಕಿನ ರಾಂಪುರ ಗ್ರಾಮದವರು ಎಂದರೆ ಸರಿ. ಆತ ಮಾನಸಿಕ ಮತ್ತು ದೈಹಿಕವಾಗಿ ಸಧೃಢರಾಗಿದ್ದಾರೆ ಎಂದರೆ ಸರಿ. ವಾದಿ ಎಂ.ಎನ್. ರಮೇಶ್ ಬಾಬು ತನಗೆ ಕೆಲಸದ ಒತ್ತಡ ಇರುವ ಕಾರಣ ಈ ಪ್ರಕರಣ ನಡೆಸಲು ನನಗೆ ಅಧಿಕಾರ ನೀಡಿರುತ್ತಾರೆ.

3) ವಾದಿ ಎಂ.ಎನ್. ರಮೇಶ್ ಬಾಬುರವರಿಂದ ಜಿಪಿಎ ಪಡೆಯುವ ಪೂರ್ವದಲ್ಲಿ ಎಷ್ಟು ದಿನಗಳ ಹಿಂದೆ ಭೇಟಿಯಾಗಿದ್ದೀರಿ ಎಂದರೆ ಸಾಕ್ಷಿಯು ತಾವು ಯಾವಾಗಲೂ ಭೇಟಿ ಆಗುತ್ತೇವೆ ಎಂದು ನುಡಿಯುತ್ತಾರೆ. ಜಿಪಿಎ ಪತ್ರವನ್ನು ವಾದಿ ಎಂ.ಎನ್. ರಮೇಶ್ ಬಾಬು ರವರೇ ತಯಾರಿಸಿಕೊಂಡು ಬಂದರು. ಜಿಪಿಎ ಮಾಡಿಕೊಂಡ ದಿನದಿಂದ ವಾದಿ ಎಂ.ಎನ್. ರಮೇಶ್ ಬಾಬುರವರಿಂದ ನಾನು ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ಜಿಪಿಎನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

4) ದಿಃ 30.06.2014 ರಂದು ಪ್ರತಿವಾದಿ ಮಂಜುಳಾರವರಿಗೆ ನೀಡಿದ ನೋಟಿಸಿನ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನೋಟೀಸನ್ನು ನಾನು ಮತ್ತು ವಾದಿ ಎಂ.ಎನ್. ರಮೇಶ್ ಬಾಬು ರವರು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 5 ರ ಅಂಚೆ ರಶೀದಿಗೆ ಹೊಂದಿಕೆಯಾಗುವಂತೆ ನಿಪಿ 7 ರ ನೋಟೀಸನ್ನು ಸೃಷ್ಟಿ ಮಾಡಿ ಕಳುಹಿಸಿದ್ದೆವು ಎಂದರೆ ಸರಿಯಲ್ಲ. ನಿಪಿ 2 ರ ಕರಾರುಪತ್ರದ ವಿಚಾರಗಳನ್ನು ವಾದಿ ಎಂ.ಎನ್. ರಮೇಶ್ ಬಾಬು, 1 ನೇ ಪ್ರತಿವಾದಿ ಮಂಜುಳಾ ಮತ್ತು ಇತರೆ ಮುಖಂಡರು ಸೇರಿ ಮಾಡಿದ್ದರು. ಆ ಪತ್ರದ ವಿಚಾರದ ಕಾಲಕ್ಕೆ ನಾನು, ಕರಿಯಪ್ಪ, ನಾಗಣ್ಣ ಗೌಡರು ಮತ್ತು ಇತರೆ ಸಾಕ್ಷಿದಾರರು ಹಾಜರಿದ್ದರು. ನಿಪಿ 3 ರ ಕರಾರುಪತ್ರವನ್ನು ತಯಾರಿಸುವ ವಿಚಾರದ ಕುರಿತು ಪತ್ರದ ದಿನಾಂಕದಿಂದ ಎಷ್ಟು ದಿನಗಳ ಹಿಂದೆ ಆ ಬಗ್ಗೆ ಮಾತುಕತೆಯಾಗಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿನ ವ್ಯವಹಾರದ ಕುರಿತು ಆ ಪತ್ರದ ಹಿಂದಿನ ದಿನಗಳಲ್ಲಿ ಆದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ

ಎಂದರೆ ಸರಿಯಲ್ಲ. ಸದರಿ ನಿಪಿ2 ಕರಾರುಪತ್ರ ತಯಾರು ಮಾಡಿದ ಹಿಂದಿನ ದಿನಗಳಲ್ಲಿ ನಡೆದ ವಿದ್ಯಮಾನಗಳ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 2 ರ ಕ್ರಯಪತ್ರದ ವಿಚಾರಗಳು ನೊಂದಾಣಾಧಿಕಾರಿ ಕಛೇರಿಯಲ್ಲಿ ನಡೆದಿತ್ತು.

**ಮುಂದುವರಿದ ಪಾಟೀ ಸವಾಲಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**